ಮೈಸೂರು ವಿಶ್ವವಿದ್ಯಾನಿಲಯ
ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-05

ಸಂ.ದೈ.ಶಿ.ವಿ/ /2025-26 ದಿನಾಂಕ: 07-03-2026

## "ಪ್ರಕಟಣೆಯ ಕೃಪೆಗಾಗಿ"

ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಮೈಸೂರು ನಗರ ಯುವ ಕ್ರೀಡಾ ಪಟುಗಳನ್ನು ಪ್ರೋತ್ಸಾಹಿಸಲು 2026 ನೇ ಸಾಲಿನ ವಿವಿಧ ಕ್ರೀಡೆಗಳ 31ನೇ ಬೇಸಿಗೆ ತರಬೇತಿ ಶಿಬಿರವನ್ನು ನುರಿತ ತರಬೇತುದಾರರಿಂದ 07 ವರ್ಷದಿಂದ 18 ವರ್ಷದ ವರೆಗಿನ ಬಾಲಕ/ಬಾಲಕಿಯರಿಗೆ ದಿನಾಂಕ: 02.04.2026 ರಿಂದ 02.05.2026ರ ವರೆಗೆ ಅಥ್ಲೆಟಿಕ್ಸ್, ಷಟಲ್ ಬ್ಯಾಡ್ಮಿಂಟನ್, ಕ್ರಿಕೆಟ್, ಫುಟ್ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ಕಬಡ್ಡಿ, ವಾಲಿಬಾಲ್, ಕುಸ್ತಿ, ಯೋಗ, ಕಿಕ್ ಬಾಕ್ಸಿಂಗ್ ಮತ್ತು ಕರಾಟೆ ಕ್ರೀಡೆಗಳಿಗೆ ಬೇಸಿಗೆ ತರಬೇತಿ ಶಿಬಿರವನ್ನು ಆಯೋಜಿಸಲಾಗುತ್ತಿದೆ. ಈ ಶಿಬಿರದಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ದಿನಾಂಕ: 16.03.2026 ರಿಂದ ಸ್ಪೋರ್ಟ್ಸ್ ಪೆವಿಲಿಯನ್ ಆವರಣದಲ್ಲಿರುವ ದೈಹಿಕ ಶಿಕ್ಷಣ ವಿಭಾಗದ ಕಛೇರಿ ವೇಳೆಯಲ್ಲಿ ಅರ್ಜಿಗಳನ್ನು ಪಡೆದು ನಿಗಧಿತ ಶುಲ್ಕವನ್ನು ಪಾವತಿಸಿ ನೋಂದಣಿ ಮಾಡಿಕೊಳ್ಳಬೇಕಾಗಿ ಈ ಮೂಲಕ ಕೋರಲಾಗಿದೆ.

(ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ: **0821-2419288** ಸಂಪರ್ಕಿಸುವುದು)

## ವಿಶೇಷ ಈಜು ತರಬೇತಿ ಶಿಬಿರ

2026ನೇ ಸಾಲಿನ ವಿಶ್ವವಿದ್ಯಾನಿಲಯದ ಈಜುಕೊಳದಲ್ಲಿ ಈಜು ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಎರಡು ಪ್ರತ್ಯೇಕ ಈಜು ತರಬೇತಿ ಶಿಬಿರಗಳನ್ನು ಆಯೋಜಿಸುತ್ತಿದ್ದು, ಮೊದಲನೇ ಈಜು ತರಬೇತಿ ಶಿಬಿರವನ್ನು ದಿನಾಂಕ: 25.03.2026ರಿಂದ 22.04.2026ರವರೆಗೆ ಹಾಗೂ ಎರಡನೇ ಈಜು ತರಬೇತಿ ಶಿಬಿರವನ್ನು ದಿನಾಂಕ: 24.04.2026ರಿಂದ 19.05.2026ರವರೆಗೆ ಮತ್ತು ಮುಂಗಡ (ಅಡ್ವಾನ್ಸ್) ಈಜು ತರಬೇತಿ ಶಿಬಿರವನ್ನು ದಿನಾಂಕ: 01.06.2026ರಿಂದ 23.07.2026ರವರೆಗೆ 07 ವರ್ಷಕ್ಕೂ ಮೇಲ್ಪಟ್ಟ ಬಾಲಕ/ಬಾಲಕಿಯರಿಗೆ ಮತ್ತು ಪುರುಷ/ಮಹಿಳೆಯರಿಗೆ ವಿಶೇಷ ಈಜು ತರಬೇತಿ ಶಿಬಿರಗಳನ್ನು ಆಯೋಜಿಸಲಾಗಿದೆ. ಈಜು ತರಬೇತಿ ಶಿಬಿರದಲ್ಲಿ ಅಭ್ಯರ್ಥಿಗಳು ಅರ್ಜಿಯನ್ನು ಈಜುಕೊಳದಲ್ಲಿ ಪಡೆದು ನಿಗಧಿತ ಶುಲ್ಕವನ್ನು ಪಾವತಿಸಿ ನೋಂದಣಿಯನ್ನು ಈಜು ಕೊಳದಲ್ಲಿಯೇ ಮಾಡಿಕೊಳ್ಳುವುದು.

(ಹೆಚ್ಚಿನ ಮಾಹಿತಿಗಾಗಿ ಶ್ರೀ ಜಯಕುಮಾರ್ ಕೆ, ದೂರವಾಣಿ ಸಂಖ್ಯೆ: **8892407462/0821-2419288** ಇವರನ್ನು ಸಂಪರ್ಕಿಸುವುದು).

ಮೇಲಿನ ವಿಷಯವನ್ನು ತಮ್ಮ ಪ್ರತಿಷ್ಠಿತ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ.

ನಿರ್ದೇಶಕರು